ಮೈಸೂರು ವಿಧಾನ ಸಭೆ

MYSORE LEGISLATIVE ASSEMBLY

Monday, the 12th March 1973/Phalguna 21, 1894 S. E.

The House met in the Assembly Chamber, Vidhana Soudha, at One of the Clock.

MADAM SPEAKER [SMT. K. S. NAGARATHNAMMA] in the Chair.

STARRED QUESTIONS

(to which oral answers were given)

Potato Crops In Hassan District

13. **Sri K. H. HANUME GOWDA** (Hassan).—

Will the Minister for Agriculture and Forests be pleased to state:—

(*a*) whether it has come to the notice of the Government that the Ryots are put to difficulties for the last 8–10 years due to failure of potato crops in Hassan District on account of diseaseless potato seeds;

(*b*) action taken by Government to distribute defectless potato seed to the Ryots?

Sri K. H. PATIL (Minister for Agriculture and Forests).—

(*a*) Yes.

(*b*) (i) The Potato seeds procured by department are being tested and distributed for sowing.

(ii) The Department is also making publicity for using the seeds tested through Agalals and other seed testing medicines by Departmental staff.

ಶ್ರೀ ಕೆ. ಎಚ್. ಹನುಮೇಗೌಡ.—ರೋಗರಹಿತವಾದ ಎಂಬುದಾಗಿ ತಪ್ಪಾಗಿ ಮುದ್ರಣವಾಗಿದೆ, ರೋಗ ಪೂರಿತವಾದ ಬಿತ್ತನೆ ಬೀಜ ಎಂಬುದಾಗಿ ಇರಬೇಕಾಗಿತ್ತು. ಹಾಸನ ಜಿಲ್ಲೆಯಲ್ಲಿ ಸುಮಾರು 25 ಸಾವಿರ ಎಕರೆಯಲ್ಲಿ ಆಲೂಗಡ್ಡೆ ಬೆಳೆ ಇದೆ. ಇದಾಖೆಯು ಎಷ್ಟು ಎಕರೆಗೆ ಆಗುವಷ್ಟು ಬೀಜ ಸರಬರಾಯಿ ಮಾಡಬಲ್ಲದು?

† ಶ್ರೀ ಕೆ. ಎಚ್. ಪಾಟೀಲ್.—ಇಲಾಖೆ ಕಾಲು ಅಂಶ ಬೇಡಿಕೆ ಮಾತ್ರ ಪೂರೈಸಬಲ್ಲುದು. ರೈತರು ಸಾಲದ್ದನ್ನು ಉಳಿದ ಖಾಸಗಿಯವರ ಕಡೆಯಿಂದ ತೆಗೆದುಕೊಳ್ಳುವುದು, ಸಿನ್ಮಾ ಮಿತ್ರರ ಕಡೆಗಳಿಂದ ಅವರು ತರಿಸುತ್ತಿದ್ದಾರೆ. ಅವರು ನರಿಯಾದುದನ್ನು ಸರಬರಾಯಿ ಮಾಡುತ್ತಿಲ್ಲ. ಆದುದರಿಂದ ಸೀಡ್ ಫಾರಂಗಳನ್ನು ಎಲ್ಲಾ ಕಡೆ ತೆರೆದು ಅವರ ಮೂಲಕ ಉತ್ತಮವಾದ ಬಿತ್ತನೆ ಬೀಜ ಸರಬರಾಯಿ ಮಾಡಲು ಪ್ರಯತ್ನ ಮಾಡುತ್ತಾ ಇದ್ದೇವೆ.

ಶ್ರೀ ಕೆ. ಎಚ್. ಹನುಮೇಗೌಡ.—ಸಿಮ್ಲಾದಿಂದ ಬರುವುದನ್ನು ಮಿತ್ರರ ಕಡೆ ದೊರೆಯುವುದನ್ನು ರೈತರು ಬೇರೆ ದೊರೆಯನೆ ತೆಗೆದುಕೊಳ್ಳುತ್ತಿರುವುದರಿಂದ ಅದು ರೋಗಪೂರಿತವಾಗಿರುವುದರಿಂದ ವೈರಸ್ ಡಿಸಿಸ್ ಬರಲು ಅವಕಾಶವಾಗಿದೆ. ಆದುದರಿಂದ ರೋಗರಹಿತವಾದ ಬೀಜ ಕೊಡುವುದನ್ನು ತಡೆಗಟ್ಟುತ್ತೀರಾ ?

ಶ್ರೀ ಕೆ. ಎಚ್. ಪಾಟೀಲ್.—ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಎಷ್ಟು ವರ್ಷದಿಂದ ಟೆಸ್ಟ್ ಮಾಡಿರುವ ಬಿತ್ತನೆ ಬೀಜ ಉಪಯೋಗ ಮಾಡಬೇಕೆಂದು ಇಲಾಖೆ ಪ್ರಚಾರ ಮಾಡುತ್ತಿದೆ ?

ಶ್ರೀ ಕೆ. ಎಚ್ ಪಾಟೀಲ್.—ಈಗ 3-4 ವರ್ಷದಿಂದ ಮಾಡುತ್ತಿದೆ.

ಶ್ರೀ ಕೆ. ಎಚ್. ಹನುಮೇಗೌಡ.—ಚಿಕ್ಕಬಳ್ಳಾಪುರದಲ್ಲಿ ಇಲಾಖೆ ಬೆಳೆದು ಕಾಲಕ್ಕೆ ಸರಿಯಾಗಿ ಬೇಕಾದ ಔಷಧಿ ಸ್ಪ್ರೇ ಮಾಡಿ ಅದನ್ನು ಸರಬರಾಯಿ ಮಾಡುವುದೇ ?

ಶ್ರೀ ಕೆ. ಎಚ್ ಪಾಟೀಲ್.—ಅಲ್ಲಿ 3 ಎಕರೆಯ ಮೇಲೆ ಬೀಜದ ಗಡ್ಡೆ ಬೆಳೆಯುವ ಕೇಂದ್ರವಿಲ್ಲ. ಹೆಚ್ಚು ಪ್ರದೇಶದಲ್ಲಿ ಬೆಳೆದು ಸರಬರಾಯಿ ಮಾಡುವ ಪ್ರಯತ್ನವಿದೆ.

Strikes and Lockouts

158. **Sri K. SRIRAMULU** (Gandhinagar).—

Will the Minister for Labour be pleased to state :—

(*a*) the number of strikes and lockouts and the industries in which they took place in the State after the present Ministry assumed office ;

(*b*) the value of loss to production and to the labourers thereby (Industrywise figures may be furnished) ?

Sri AZEEZ SAIT (Minister for Labour).—

(*a*) 79 strikes and 17 lockouts have taken place (the details are furnished in the Statement placed on the Table of the House).*

(*b*) **The** loss due to strikes and lockouts in respect of production is Rs. 10,29,26,096 and that in respect of labourers is Rs. 1,30,09,290 (the details are furnished in the Statement placed on the Table of the House).*

ಶ್ರೀ ಕೆ. ಶ್ರೀರಾಮುಲು.—ಉತ್ಪತ್ತಿಯಿಂದ ರಾಭ ಬರುವುದರಲ್ಲಿ ಈಗಾಗಿರುವ ನಷ್ಟ ಸರಿದೂಗಿಸಲಾಗುವುದೇ?

† ಶ್ರೀ ಅಜೀಜ್‌ಸೇಟ್.—ಆ ಲೆಕ್ಕ ನನ್ನ ಹತ್ತಿರವಿಲ್ಲ.

---

†Indicates that the remarks or speeche have not been revised by the member concerned.

* Copies pleased in the Mysore Legislative Library *Vide* No. 10, dated 12th March 1973.